International Journal of Kannada Research
www.kannadajournal.com

ISSN: 2454–5813
IJKR 2018; 4(1): 61-66
© 2018 IJKR
www.kannadajournal.com
Received: 11-11-2017
Accepted: 12-12-2017

**ಡಾ॥ಶಿವಾನಂದ.ಎಂ.ಹಂಚಿನಾಳ**
ಕನ್ನಡ ವಿಭಾಗ ಸಹ ಪ್ರಾಧ್ಯಾಪಕರು
ನ್ಯೂ ಹೊರೈಜ್ಜನ್ ಕಾಲೇಜ್
ಕಸ್ತೂರಿನಗರ ಬೆಂಗಳೂರು

**Correspondence**
**ಡಾ॥ಶಿವಾನಂದ.ಎಂ.ಹಂಚಿನಾಳ**
ಕನ್ನಡ ವಿಭಾಗ ಸಹ ಪ್ರಾಧ್ಯಾಪಕರು
ನ್ಯೂ ಹೊರೈಜ್ಜನ್ ಕಾಲೇಜ್
ಕಸ್ತೂರಿನಗರ ಬೆಂಗಳೂರು

# ಕಾವ್ಯ ಮೀಮಾಂಸೆ ಮತ್ತು ವಿಮರ್ಶಾ ಚಿಂತನೆಗಳಿಗೆ ಸಂಬಂಧಿಸಿದಂತೆ ಕಣವಿಯವರ ನೋಟಗಳು

**ಡಾ॥ಶಿವಾನಂದ.ಎಂ.ಹಂಚಿನಾಳ**

ಕನ್ನಡ ಸಾಹಿತ್ಯ ರೂಪಗಳಲ್ಲಿಯೇ ಕಾವ್ಯ ರೂಪ ವಿಶೇಷ ಕುತೂಹಲ ಪೂರ್ಣವಾದ ಒಂದು ಮಾಧ್ಯಮವೆನ್ನಬಹುದು. ಗಾಢವಾದ ರಹಸ್ಯವನ್ನು ಬೇಧಿಸಿ, ಸ್ವಕೀಯ, ಪರಕೀಯ ಅನುಭವಗಳನ್ನು ಜೀವನ ಪ್ರೀತಿಯಿಂದ ದಾಖಲಿಸಿಕೊಡುವ ಸೂಕ್ಷ್ಮ ಅಂತರ್ಯಾಣದ ಉತ್ಪನ್ನವಿದು. ಇಂಥ ಸೃಷ್ಟಿ ಸಂದರ್ಭ ಕುರಿತು ಕಣವಿಯವರು “ಕಾವ್ಯ ಕರ್ಮ ನವಮಾಸ ತುಂಬಿ ಬರುವ ಜೀವ ಪವಾಡವೆ”ಂದು ವ್ಯಾಖ್ಯಾನಿಸುತ್ತಾರೆ. ಮಾತು ಕಾವ್ಯವಾಗುವುದೇ ಒಂದು ಸೋಜಿಗವೆಂದು ಇನ್ನೊಂದು ಕಡೆ ವಿಸ್ಮಯವನ್ನು ವ್ಯಕ್ತಪಡಿಸುತ್ತಾರೆ. ಕಾವ್ಯ ಕ್ರಿಯೆಯ ಬಗ್ಗೆ ಕಣವಿಯವರು ಪರೋಕ್ಷವಾಗಿ ಪದ್ಯ ರೂಪದಲ್ಲಿ ಹೀಗೆ ಹೇಳುತ್ತಾರೆ.

> “ಮನೆಯ ಕಟ್ಟುವ ಮೊದಲು ನಕ್ಷೆಯನು ತೆಗೆವಂತೆ
> ಭಾವ ಕಾಣುವುದದನು ನನಸಾಗಿಸಿ
> ಆಮೇಲೆ ಕಲ್ಲು ಇಟ್ಟಿಗೆ ಗಚ್ಚು ಗಾರೆಯಲಿ
> ಭದ್ರಗೊಳಿಸುವದರನು ರೂಪಗೊಳಿಸಿ”[೧]

ಕಣವಿಯವರು ೧೯೪೪ರಲ್ಲಿ ಕಾವ್ಯ ರಚನೆಗೆ ತೊಡಗುವ ಸಂದರ್ಭದಲ್ಲಿ ಅನೇಕ ಸಾಹಿತ್ಯಕ ಸವಾಲುಗಳನ್ನು ಎದುರಿಸುವಂತಹ ಸ್ಥಿತಿ ಇತ್ತು. ಕಣವಿಯವರ ಜೀವನದಲ್ಲಿಯೇ, ಬೇಂದ್ರೆ, ಕುವೆಂಪು ಅವರ ವೈವಿಧ್ಯಮಯವಾದ ರಚನೆಗಳು ಪ್ರಭಾವ ಬೀರಿದ್ದವು. ಈ ಪ್ರಭಾವಗಳನ್ನು ಮೈಗೂಡಿಸಿಕೊಂಡು ಹೊಸ ಬಗೆಯ ಕವಿತೆಗಳನ್ನು ಕಣವಿಯವರು ರಚಿಸುವ ಅನಿವಾರ್ಯತೆ ಇತ್ತು. ನವೋದಯ ಕಾವ್ಯ ಭಾಷೆ, ಅನೇಕ ಕವಿಗಳಲ್ಲಿ ಪುನರಾವರ್ತನೆ ಆಗುವುದನ್ನು (ಶಬ್ದ, ಉಪಮೆ, ರೂಪಕ, ಛಂದಸ್ಸು, ಲಯ) ಕಂಡು ಕೊಂಡ ಕಣವಿಯವರು ತಮ್ಮ ಕಾವ್ಯದಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತಂದರೆನ್ನುವುದು ಆ ಸನ್ನಿವೇಷದ ಕುತೂಹಲಗಳಲ್ಲಿ ಒಂದು. ಕಣವಿಯವರು ಮುಖ್ಯವಾಗಿ ‘ಕಾವ್ಯಾಕ್ಷಿ’ ಸಂಗ್ರಹದಲ್ಲಿ ಭಾಷೆ, ಶಿಲ್ಪದ ಕುರಿತು ಗಂಭೀರವಾಗಿ ಬದಲಾವಣೆಯನ್ನು ತರುವ ಎಚ್ಚರಿಕೆಯನ್ನು ವಹಿಸಿದ್ದನ್ನು ಗಮನಿಸಬಹುದು.

> “ಕಲ್ಲು ಮುಳ್ಳು ತುಳಿದು ದಾರಿ ಸಾಗುತಿರುವೆಡೆ
> ಹೆಜ್ಜೆಗೊಂದು ಬಿಚ್ಚ ನುಡಿಯ ನೆನಪು ಬರವೊಡೆ
> ನಂಬಿದಂಥ ಬಿಂಬ ಕಣ್ಮನ ಸೂರೆಗೊಂಡೆದೆ
> ಒಲವಿನೊಂದು ಸೂತ್ರವಿಡಿದು ಬರುವೆ ನಿನ್ನೆಡೆ
> ನನ್ನದೇನು ನಾನೆ ನಾನು, ಉಳಿದ ಪಡವೆ ವಸ್ತುವಿಲ್ಲ
> ಅದರ ಬಯಕೆ ನನಗೆ ಹೊಲ್ಲ
> ಇದುವೆ ಪಂಥವು
> ನನ್ನ ಹಂತವು
> ಬಾಡುತುಹುದು ಎದೆಯ ಮುಗುಳು ಬೆಳಕಿನೆಡೆಗೆ
> ಉರುಳುತಿಹುದು ಜೀವ ಝರಿಯ ಅಳಲ ಕಡಲಿಗೆ”[೨]

ಕವಿಯ ಗಮನ ನವೋದಯ ಪರಂಪರೆಯಲ್ಲಿಯೇ ಶಿಲ್ಪದ ಕಡೆಗೆ ಹರಿದದ್ದು ತುಂಬಿ ಬರುವ ಭಾವಗಳನ್ನು ಶಿಲ್ಪದ ಒಡಲೊಳಗೆ ವ್ಯವಸ್ಥಿತವಾಗಿ ಮುರಿದು ಕಟ್ಟುವ ಕಣವಿಯವರ ಈ ತನ್ಮಯತೆಯನ್ನು ಕಂಡಾಗ ಪ್ರಾರಂಭದಲ್ಲಿಯೇ ಈ ಕವಿ ಅಭಿವ್ಯಕ್ತಿ ಕ್ರಮಕ್ಕೆ ಮಹತ್ವ ವಹಿಸಿದ್ದು ಆಶ್ಚರ್ಯವನ್ನು ಮೂಡಿಸುತ್ತದೆ. ಅವರೇ ತಮ್ಮ ಮನದ ಇಂಗಿತವನ್ನು ಮೇಲಿನ ಪದ್ಯದಲ್ಲಿ ಹೀಗೆ ಹೇಳುತ್ತಾರೆ.

> “ಬಿಡುವಿನೆಡೆಗೆ ಸಾಗಲೆಂದು ಇಲ್ಲಿ ಬಿಡುಗಡೆ
> ಬಯಸಿದನಿತು ಬಿಗಿಯುತಿಹುದು ಬಂಧವೊಂದೆ
> ಎನ್ನ ಪಾಡಿಗೆನ್ನ ಬಿಡದು ಎಲ್ಲಿ ನಿಲುಗಡೆ”[೩]

ಕಣವಿಯವರು ತಮ್ಮ ಸೃಜನಶೀಲತೆಯಲ್ಲಿ ಎದುರಿಸುವ ಸಮಸ್ಯೆಯನ್ನು ಇಲ್ಲಿ ಕಾಣಬಹುದು. ಪರಂಪರೆಯ ಪ್ರಭಾವವನ್ನು ಬಿಟ್ಟು ಹೋಗಲೂ ಸಾಧ್ಯವಿಲ್ಲ. ತಮ್ಮೊಳಗೆ ಕಾಡಿ ಮಿಡಿಯುವ ‘ಬಂಧ’ವನ್ನು ಕೈ ಬಿಡಲಿಕ್ಕೂ ಆಗುವುದಿಲ್ಲ. ಈ ಗೊಂದಲ ತಳಮಳ ಅವರಲ್ಲಿ ಸಾಕಷ್ಟು ಪೀಡಿಸಿದೆ. ಎನ್ನ ಪಾಡಿಗೆನ್ನ ಬಿಡದು, ಎಲ್ಲಿ ಬಿಡುಗಡೆ? ಎಂದು ಮುಕ್ತವಾಗಿ ಸ್ವತಂತ್ರವಾಗಿ ಮುಂದೆ ಸಾಗುವುದನ್ನು ಕಾಣಬಹುದು. ಹೀಗೆ ಭಾಷೆ ಮತ್ತು ಕಾವ್ಯ ರೂಪದ ನೋಟದಲ್ಲಿ ಕವಿ ಲಕ್ಷ್ಯವನ್ನು ವಹಿಸುತ್ತಿರುವುದರೊಂದಿಗೆ ಈ ಪದ್ಯದ ಅರ್ಥ ಭಾರವು ಇನ್ನು ಬೇರೆ ಬೇರೆಯಾದ ಮಗ್ಗುಲುಗಳನ್ನು ತೋರಿಸುತ್ತದೆ.

> “ಹೊನ್ನ ಕೇದಗೆ ಹುಡಿಯ ಇಡಿ ಕಿರಿದು ತುಂಬಿರುವ
> ಹೊಂಗನಸು ಹೂತಿರುವ ಭರಣಿಯಂತೆ
> ದುಂಡು ಮೊಗ ಸುಂದನು ಮೂಡಿರುವ ಚಂದಿರನು
> ಭಾನು ಭುವಿಗಳ ಬಯಕೆ ಹೆಣ್ಣಿನಂತೆ”[೪]

ಇಲ್ಲಿ ರಚನೆ ಸರಳವಾದಂತೆ ಕಂಡರೂ ಕಾವ್ಯ ಬಂಧ ಅಂತ್ಯ ಪ್ರಾಸದೊಡನೆ ಒಳ ಪ್ರಾಸ, ಲಯ, ಪದ ಪ್ರಯೋಗದ ಮೇಲೆ ಇರುವ ಹಿಡಿದ ಎಲ್ಲವೂ ಇಲ್ಲಿ ಗೋಚರವಾಗುತ್ತದೆ.

ಕಾವ್ಯದ ಸ್ವರೂಪ ಬಂಧ, ಧಾಟಿ, ಲಯ, ಭಾಷೆ–ಭಾವಗಳನ್ನು ದಕ್ಕಿಸಿಕೊಳ್ಳುವ ತಾಕತ್ತು ಕಣವಿಯವರಲ್ಲಿ ಸ್ವಕೀಯವಾಗಿ ಸೃಜನಗೊಂಡಿರುವ ಶಕ್ತಿ. ಪರಂಪರೆಯ ಪ್ರಭಾವದಲ್ಲಿಯೇ ತಮ್ಮ ಭಾವಗಳನ್ನು ತೋಡಿಕೊಳ್ಳಬೇಕಾಗಿ ಬಂದರೂ ಆತ್ಮ ಶೈಲಿಯ ಭಾವ ಸ್ನಿಗ್ಧತೆ, ತಕ್ಕ ಭಾವಾಭಿವ್ಯಕ್ತಿ, ಪ್ರಯೋಗಶೀಲತೆ, ಮೌಲ್ಯ, ತಿಳುವಳಿಕೆಗಳ ಮುಖೇನ ತಮ್ಮ ಶ್ರೇಷ್ಠತೆಯನ್ನು ಜತನ ಮಾಡಿಕೊಳ್ಳುವಲ್ಲಿ ಹೆಣಗಿದವರು ಕಣವಿ. ಅಭಿವ್ಯಕ್ತಿ ಮತ್ತು ಸಂವೇದನಾ ರೀತಿಗಳಲ್ಲಿ ಸದಾ ಸ್ವಚ್ಛಂದತೆಯನ್ನುಳಿಸಿಕೊಂಡು ತಮ್ಮ ಕಾವ್ಯದ ಸ್ವರೂಪವನ್ನು ವಿಸ್ತರಿಸಿಕೊಂಡವರು. ಹೊಸಗನ್ನಡ ಕಾವ್ಯವು ಪ್ರಾಚೀನ ಕಾವ್ಯ ಪರಂಪರೆಯ ಸತ್ವವನ್ನು ಹೀರಿಕೊಂಡು, ಜನಪದರ ಆಡು–ನುಡಿ, ವಾಕ್ಯವೇಷ್ಟನೆಗಳು, ಗಾದೆ ಮಾತುಗಳು, ಪಡೆ ನುಡಿಗಳು, ಸಂಸ್ಕೃತದ ಪದಪುಂಜಗಳು ಹಾಗೂ ವಿದೇಶಿ ಪದ ಪ್ರಯೋಗದ ಮೂಲಕ ಭಾಷೆಯನ್ನು ಮಿದ್ದಿಕೊಂಡವರು. ಜಾನಪದದ ಮಟ್ಟುಗಳ ಮರ್ಮವನ್ನು, ಗತ್ತನ್ನು ಜೀರ್ಣಿಸಿಕೊಂಡು ಅವುಗಳನ್ನು ಕಾವ್ಯದಲ್ಲಿ ದುಡಿಸಿಕೊಳ್ಳುತ್ತ ಬಂದವರು. ಭಾಷೆಗೆ ಒಂದು ಹೊಸ ಚಾಲನೆಯನ್ನು ಸಂವೇದನಾ ರೀತಿಗೆ ಒಂದು ಹೊಸ ನಿಲುವನ್ನು ಧಾರೆಯೆರೆದ ಕವಿ ಕಣವಿ ಇವುಗಳ ಸಾಧ್ಯತೆಯ ಗುಣದಿಂದ ಮಹತ್ವಪೂರ್ಣವಾಗಿ ನಿಲ್ಲುತ್ತಾರೆ. ‘ಭಾವ ಜೀವಿ’ ಕವಿತೆ ಅದನ್ನು ಚೆನ್ನಾಗಿ ಪ್ರಕಟಿಸುತ್ತದೆ.

ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭವೊಂದರ ಎಲ್ಲ ಒಳ ಸೂಕ್ಷ್ಮಗಳನ್ನು ಗ್ರಹಿಸಿಕೊಂಡು ಅವಕ್ಕೆ ಪಡಿ ಮಿಡಿದು ನವೋದಯಕ್ಕೆ ಕಾರಣವಾಗುವ ಮಹತ್ವದ ಕವಿಯು ತನ್ನ ಜೀವನ ಧೋರಣೆ ಮತ್ತು ಕಾವ್ಯ ಸೃಷ್ಟಿ ಎಲ್ಲದರಲ್ಲಿಯೂ ಪರಿವರ್ತನೆಯ ಹರಿಕಾರನಾಗುತ್ತಾನೆ. ಅವರ ವ್ಯಕ್ತಿತ್ವದ ಪ್ರತಿಯೊಂದು ಅಂಶವೂ ಕೂಡ ಸಂಪ್ರದಾಯದ ಉತ್ತಮಾಂಶಗಳನ್ನು ಗ್ರಹಿಸಿಯೂ ಆಧುನಿಕತೆಯ ಕಡೆಗೆ ತುಡಿಯುತ್ತದೆ. ಕಣವಿಯ ಕಾವ್ಯ ಧಾರೆಯ ಚಿಂತನೆ ನಡೆದಿರುವುದು ಅಂಥ ನೆಲೆಯಿಂದ.

ಕಣವಿಯವರ ನವೋದಯ ಕಾವ್ಯ ಭಾಷೆ ತುಂಬಾ ಸರಳವಾದುದು. ಸಹಜ ಸೌಂದರ್ಯದೊಂದಿಗೆ ನಡೆಯುವ ರೀತಿ, ಗತ್ತು, ಹಿತಮಿತ ಸೌಖ್ಯ ಗುಣಗಳಿಂದ ಮಧುರವಾದುದೂ ಹೌದು.

> “ಎದೆಗುಂದಿಯೊ ಹದಗೆಟ್ಟ ಮುದಗೆಟ್ಟ ದನಿಯೊ
> ಒಲವಿನೆಲೆಯಲೆಯಿಂದ ತೂರ್ವ ಸಿರ್ಪನಿಯೊ” [೫]
> “ನೀಲ ಗಗನದ ಆಚೆ ನೀಲಿಮೆಯ ಬಳಿ ಸಾರಿ
> ಬೆಣ್ಣೆ ಬೆಟ್ಟದ ಮೋಡ ಗರ್ಭಗುಡಿ ಸೀಳಿ” [೬]
> “ಬಣ್ಣ ಬಣ್ಣದೊಳಿಂತು ಸಂಜೆ ರಂಜಿಸುತಿರಲು
> ಬಂಜೆ ಮೆದುಳಿಗು ಬಣ್ಣವೇರುತಿಹುದು” [೭]
> “ಸದ್ದಿರದೆ ಸಾಗುವುದೆ ಜೀವನದಿ ತೀರ್ಥಯಾತ್ರೆ
> ಕಡೆ ಮುಟ್ಟಿ ಪಡೆವ ಸುಖಕೀ ದುಃಪಾನ ಪಾತ್ರೆ” [೮]
> “ಒಂದು ಚಣವಾದರೂ ನನ್ನ ಬಳಿಯಲಿ ಕುಳಿತು
> ಕುಶಲವಾರ್ತೆಯ ಮಾತನಾಡ” [೯]

ಇಂಥಲ್ಲಿ ಕಣವಿಯವರ ಪ್ರಾಸದ ಗುಣ, ಓಜಸ್ಸು, ಸ್ನಿಗ್ಧತೆ–ಮುಗ್ಧತೆ, ವಿಕಾಸ–ವಿಷಣ್ಣತೆ, ಛಂದಸ್ಸಿನ ಮುಕ್ತ ನಡಿಗೆ ಅಗತ್ಯವಾದ ತೊಡುಗೆ, ರೀತಿಯ ಬದಲಾವಣೆ, ರೂಪದ ವೈಶಿಷ್ಟ್ಯ, ವೈವಿಧ್ಯ ಸರಳವಾಗುತ್ತಲೇ, ಸಂಕೀರ್ಣವಾಗುವುದು, ಸಂಕೀರ್ಣವಾಗುತ್ತಲೇ ಸರಳವಾಗುವುದು. ಅರ್ಥ ನಿಷ್ಪತ್ತಿಗಾಗಿಯೇ ಔಚಿತ್ಯವರಿತು ತಂದು ಜೋಡಿಸುವುದು ಇಂತಹ ಸಂದರ್ಭಗಳಲ್ಲಿ ಲಯದ ಗತಿ–ಮತಿಯನ್ನು ಮರೆಯದೇ ತೂಕವಾಗಿಸುವುದು ಇವರ ಕಾವ್ಯದ ವಿಶೇಷ.

‘ಕಾವ್ಯಾಕ್ಷಿ’ಯಿಂದ ‘ಭಾವ ಜೀವಿ’ಗೆ ಹೋದಾಗ ಭಾಷಾ ಸಿದ್ಧತೆ ಮತ್ತು ಸಂವೇದನೆಗಳ ದ್ರವ್ಯಗಳಲ್ಲಿ ವ್ಯತ್ಯಾಸವಾಗಿರುವುದನ್ನು ನೋಡಬಹುದು. ಭಾಷೆಯನ್ನು ಸಿದ್ಧಗೊಳಿಸುವ ತರಾತುರಿ ಹಾಗೂ ಕವನ ಕಟ್ಟುವ ಕ್ರಿಯೆಯಲ್ಲಿ ಬಹುಶಃ ಇಷ್ಟೊಂದು ಎಚ್ಚರವಹಿಸಿ ಅಸಲು ಕಸಬಿಗೆ ತೊಡಗುವ ರೀತಿಯು ಕಾವ್ಯದ ಬಗ್ಗೆ ಇರುವ ಗಂಭೀರ ಕಾಳಜಿ ಸೃಷ್ಟಿ ಕಾರ್ಯವನ್ನು ಬಿಗುವಾಗಿ ಎತ್ತಿಕೊಂಡ ಒಲವು–ನಿರ್ಧಾರ, ಇತ್ಯಾದಿ ಕಣವಿಯವರ ಮಾನಸಿಕ ಸಿದ್ಧತೆಗಳ ಪೂರ್ಣಪ್ರಜ್ಞೆಯನ್ನು ಸಾರುತ್ತದೆ. ಛಂದಸ್ಸು, ಲಯ, ಮಾಂತ್ರಿಕತೆ, ಇವೆಲ್ಲವುಗಳನ್ನು ಮೀರಿ ಭಾವ ಜೀವಿ ನಿರ್ಮಲವಾದ ಕಾವ್ಯೋಲ್ಲಾಸವನ್ನು ಕೊಡುವುದರ ಜೊತೆಗೆ ಉನ್ನತವಾದ ಪರಿಭಾವನೆಗೂ ಒಯ್ಯುತ್ತದೆ.

“ಕಾವ್ಯ ಮುಖ್ಯವಾಗಿ ಭಾಷೆಯಲ್ಲಿ ರೂಪುಗೊಂಡ ಕವಿಯ ಭಾವ ನಿರೂಪಣೆ. ಸಮಾಜ ಪರಿಸರದಲ್ಲಿ ನಡೆಯುವ ನಿತ್ಯದ ಹೋರಾಟಗಳನ್ನು ಆಲೋಚನೆ, ಅನುಭವಗಳನ್ನು ಅಳವಡಿಸಿಕೊಂಡು ಭಾಷೆ ಬೆಳೆಯುತ್ತದೆ. ಉದ್ದೀಪನಗೊಂಡ ಭಾವ ತನಗೆ ಅನುರೂಪವಾದ ಭಾಷೆಯಲ್ಲಿ ಮೈದೋರುವವರೆಗೂ ಕವಿಗೆ ಕಸಿವಿಸಿ ತಪ್ಪದು. ಭಾಷೆಯ ಗತ್ತು ಗಮಕಿಗಳನ್ನು ಬಲ್ಲ ಕವಿಯ ಭಾವ ತನ್ನ ಜನಜೀವನವನ್ನು ಅದರಲ್ಲಿಯೇ ಕಂಡು ಕೊಳ್ಳುತ್ತದೆ. ಶಬ್ದಗಳಲ್ಲಿ ನಿಶ್ಶಬ್ದವಾಗಿ ಭಾವಾಲೋಚನೆಗಳ ಲಯದಲ್ಲಿ ಹರಿದು ಛಂದೋಬಂಧದಲ್ಲಿ ಅಂದವಡೆದ ಶಬ್ದಾರ್ಥ ಸಂಗೀತ ಅದು”[೧೦]. ಹೀಗೆ ಕಣವಿಯವರ ಮಾತುಗಳಲ್ಲಿಯೇ ಭಾಷೆ–ಭಾವ ಶಿಲ್ಪ ಕುರಿತು ಚರ್ಚೆಯಾದ ಸಂಗತಿ ಕನ್ನಡ ಕಾವ್ಯಾಭ್ಯಾಸಕ್ಕೆ ಅನುಕೂಲವಾಗಿತ್ತಿದೆ.

ಕಣವಿಯವರು ತಮ್ಮ ಕಾವ್ಯದಲ್ಲಿ ಕವಿತೆಯ ಉದ್ದೇಶಕ್ಕೆ ಉಳಿದೆಲ್ಲ ಪರಿಕರ–ಉಪಕರಣಗಳನ್ನೆಲ್ಲ ಪ್ರಧಾನವಾಗಿ ತರದೇ ಸಹಾಯಕ ಸಾಧನವಾಗಿ ತರುತ್ತಾರೆ. ಅಲಂಕಾರ, ಉಪಮೆ, ರೂಪಕಗಳನ್ನು ತರುವಲ್ಲಿ, ಅರ್ಥವನ್ನು ಹಿಡಿದಿಡುವ ಅಥವಾ ವ್ಯಂಜಿಸಿಕೊಡುವುದರಲ್ಲಿ ಸಾರ್ಥಕಗೊಳ್ಳುವುದನ್ನು ಕಾಣಬಹುದು. ಕಣವಿಯವರು ಛಂದಸ್ಸಿನಲ್ಲಿ ಅಂಥ ಪ್ರಯೋಗಶೀಲರು. ಅನ್ನಿಸದಿದ್ದರೂ ಒಟ್ಟು ಕವಿತೆಗೆ ಛಂದಸ್ಸನ್ನು ಸಾಮಗ್ರಿಯಾಗಿ ಬಳಸಿಕೊಳ್ಳುವುದರಲ್ಲಿ ತೋರಿಸುವ ವಿವೇಕ ಮೆಚ್ಚತಕ್ಕದ್ದು. ಕಣವಿಯವರ ಕಾವ್ಯ ಭಾಷೆಯನ್ನು ಕುರಿತು ಆಲೋಚಿಸುವಾಗ ಸಮಗ್ರವಾಗಿ ಇಡಿಯಾಗಿ ಒಂದು ನಿರ್ಣಯದ ಘಟ್ಟಕ್ಕೆ ಬಂದು ನಿಲ್ಲಲಾಗುವುದಿಲ್ಲ. ಯಾಕೆಂದರೆ ಅವರು ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯಗಳಂತಹ ಕಾವ್ಯ ಪರಂಪರೆಗಳಲ್ಲಿ ಕಾಲದಿಂದ ಕಾಲಕ್ಕೆ ಕಣವಿಯವರು ವಸ್ತುಗಳನ್ನು ಸ್ವೀಕರಿಸುವ ನೆಲೆಗಳು ವ್ಯತ್ಯಾಸಗೊಳ್ಳುತ್ತ ಹೋದಂತೆ ಅವರ ಭಾಷೆ–ರೂಪ, ಅಭಿವ್ಯಕ್ತಿ–ರೀತಿ ಕೂಡಾ ರೂಪಾಂತರಗೊಳ್ಳುತ್ತಲೇ ಸಾಗಿದೆ.

ನವ್ಯ ಕಾವ್ಯದ ಮುಕ್ತ ಛಂದಸ್ಸು ಸಾಮಾನ್ಯವಾಗಿ ತನ್ನ ಹೊರ ಆವರಣದಲ್ಲಿ ಮೊದಲ ದೃಷ್ಟಿಗೆ ಪ್ರಭಾವವನ್ನು ಮಾಡದೇ ಅದರ ಒಟ್ಟು ಚರಿತ್ರೆಯ ಮೂಲಕ ತೋರಿಸಿಕೊಂಡು ಹೋಗುತ್ತ ಕಾವ್ಯದ ಅಂತರಾಳದ ಮೈತ್ರಿಯೊಳಗೆ ಸುಖವನ್ನು ನೀಡುತ್ತ ಅನುಭವಿಸುತ್ತಲೇ ಅಲ್ಲಲ್ಲಿ ತನ್ನ ಹಿತವಾದ ಹೆಜ್ಜೆಗಳನ್ನು ಮೂಡಿಸಿ ಹೋಗಿದ್ದರೆ ಸಾಕ್ಷಿ, ಹೊಸ ಭಾವೋತ್ಕರ್ಷವನ್ನು ಸಂಗ್ರಹಿಸಿ ಕೊಡುತ್ತದೆ. ಭಾವ ಮತ್ತು ಚಿಂತನೆಗಳನ್ನು ಸಮೀಕರಿಸಿಕೊಳ್ಳುತ್ತ ಛಂದಸ್ಸು ಅರ್ಥ ಹೊಂದಾಣಿಕೆಗೆ ಆತುಕೊಂಡು ತನ್ಮೂಲಕ ಪರಂಪರೆಗಳನ್ನು ಮೈಮರೆತು ಬಿಚ್ಚುತ್ತಾ ನಿಲ್ಲುವ ವೃಷ್ಯ ಬಂಧ ಮಹತ್ವಪೂರ್ಣವಾದ ಪರಿಣಾಮವನ್ನು ತಲುಪಿಸುತ್ತದೆ. ಕಣವಿಯವರ ಕಾವ್ಯ ಧೋರಣೆಗೆ ಈ ಮಾತು ಸಂಬಂಧಿಸಿರುವುದರಿಂದ ಜಿ.ಎಚ್. ನಾಯಕರು ಹೇಳಿದಂತೆ ಮಾತನ್ನು ಲಕ್ಷಿಸಿ ಕಣವಿ ಕಾವ್ಯದ ಚಿತ್ರಕ ಶಕ್ತಿಯನ್ನು, ನಿಪುಣತೆಯನ್ನು ಗಮನಿಸಬಹುದು. "ಭಾವದ ಉತ್ಕಟ ಸ್ಥಿತಿಯಲ್ಲಿ ಕಾವ್ಯ ಸೃಷ್ಟಿಯಾಗುತ್ತದೆ ಎಂದು ತಿಳಿಯುವ ಕವಿ ಭಾವದ ಪರಾಕಾಷ್ಠೆಯಲ್ಲಿ ಅಥವಾ ರಸಾನುಭವ ಸ್ಥಿತಿಯಲ್ಲಿ ಮನಸ್ಸನ್ನು ನೆಲೆಗೊಳಿಸುವುದು ಕಾವ್ಯದ ಪರಮ ಗುರಿಯೆಂದು ಪರಿಗಣಿಸುತ್ತಾನೆ. ಈ ಮೂಲಕ ಉಂಟಾಗುವ ಭಾವ ಶೋಧನೆಯ ಸಂಸ್ಕಾರ ವಿಶೇಷವೇ ಕಾವ್ಯ ಪ್ರಯೋಜನವೆಂದು ತಿಳಿಯುತ್ತಾನೆ. ಈ ತಿಳುವಳಿಕೆಯ ಹಿನ್ನೆಲೆಯಲ್ಲಿ ಕಾವ್ಯ ರಚಿಸುವ ಕವಿ ತನ್ನ ವ್ಯಕ್ತಿತ್ವದ ಮೂಲ ಧಾತುಗಳಾದ ಭಾಷೆ ಮತ್ತು ಚಿಂತನ ಇವುಗಳಲ್ಲಿ ಭಾವ ಪಕ್ಷಪಾತಿ ನಿಲುವಿನಲ್ಲಿ ತನ್ನ ಸೃಜನಶೀಲ ಚೈತನ್ಯವನ್ನು ತೊಡಗಿಸುತ್ತಾನೆ. ಹಾಗೆಂದ ಮಾತ್ರಕ್ಕೆ ಅವನ ಕಾವ್ಯದಲ್ಲಿ ಚಿಂತನ ದ್ರವ್ಯಕ್ಕೆ ಸ್ಥಾನವಿಲ್ಲವೆಂದಲ್ಲ. ಅದರ ಸ್ಥಾನವೇನಿದ್ದರೂ ಅದು ಗೌಣ ನೆಲೆಯದಾಗುತ್ತದೆ. ಸಮಾನ ನೆಲೆಯದಾಗುವುದಿಲ್ಲ"[೧೧]. ಅಡಿಗ, ಗೋಕಾಕರ ನವ್ಯ ನಿಲುವುಗಳಲ್ಲು ಸ್ನೇಹಪೂರ್ವಕವಾಗಿಯೇ ಅಧ್ಯಯಿನಿಸಿದ ಕಣವಿಯವರು 'ದೀಪಧಾರಿ' ಮುಖೇನ ತಮ್ಮ ಕಾವ್ಯದ ಹೊಸ ಬಾಗಿಲನ್ನು ಕವಿಯು ಭಾಷೆಯ ಜೊತೆ ಚೆಲ್ಲಾಟವಾಡಬೇಕಾಗುತ್ತದೆ, ರಮಿಸಬೇಕಾಗುತ್ತದೆ. ಅದರ ಕಟಾಕ್ಷಕ್ಕೆ ಕಾಯ ಬೇಕಾಗುತ್ತದೆ. ಆಯಾ ಕವಿಯ ವಿಶಿಷ್ಟ ಧಾತುಗಳನ್ನು ಸ್ವಂತಿಕೆಯ ಕಣಗಳನ್ನು ಅವನು ಬಳಸುವ ಭಾಷೆ ಒಗ್ಗಿಸಿಕೊಳ್ಳದಿದ್ದರೆ ಅವನಿಗೆ ಮಾನವಿಲ್ಲ ಎನ್ನುವ ಅಳುಕು ಕಣವಿಯವರನ್ನು ಕಾಡಿದಾಗ 'ದೀಪಧಾರಿ' ಸಂಗ್ರಹದಲ್ಲಿಯೇ ಛಂದಸ್ಸಿನ ಬದಲಾವಣೆಯೊಂದಿಗೆ ಭಾಷಾ ಸಿದ್ಧತೆಯ ಲಕ್ಷಣಗಳೂ ತೋರಿ ಬರುತ್ತವೆ. ನವ್ಯ ಛಂದಸ್ಸನ್ನು ಕುರಿತು ಕಣವಿಯವರೇ ಹೇಳುವ ಮಾತನ್ನು ಗಮನಿಸಿದಾಗ ಈ ಆಲೋಚನೆ ಇನ್ನೂ ಸ್ಪಷ್ಟವಾಗುತ್ತದೆ. "ಛಂದಸ್ಸಿನ ಬಳಕೆಯೆಂದರೆ ತಂತಿಯ ಮೇಲೆ ನಡೆದ ಹಾಗೆ ಸ್ವಲ್ಪ ತೂಕ ತಪ್ಪಿದರೂ ಕಾವ್ಯ ಬಿದ್ದು ಹೋಗುತ್ತದೆ. ಮುಕ್ತ ಛಂದಸ್ಸಿನ ಬಳಕೆಯಲ್ಲಿ ಇನ್ನೂ ಹೆಚ್ಚಿನ ಸೂಕ್ಷ್ಮತೆ ಇರಬೇಕು. ನವ್ಯ ಕಾವ್ಯಕ್ಕೂ ತನ್ನದೇ ಆದ ಛಂದಸ್ಸು ಇದ್ದೇ ಇದೆ. ಅದು ಸ್ವಚ್ಛಂದ ಅಭಿವ್ಯಕ್ತಿಯ ಸಲೀಸುತನವಲ್ಲ"[೧೨].

"ಭೂ ಮಂಡಲದ ನೆತ್ತಿಯ ಮೇಲೆ ಹೊತ್ತು
ಮೇಲೆತ್ತುವ್ವೊಲು
ಏಳುವವನನಾಮತ್ತು
ಜೋಲಿ ಹೊಡೆಯುತ ತಂತಿ ಮೇಲೆ ಓಡುವ, ನಡೆವ
ವಿವಿಧ ಕಸರತ್ತು
ಬಂದು ನೋಡಿರಿ ಒಮ್ಮೆ ಗರ್ದಿಗಮ್ಮತ್ತು" [೧೩]

ಈ ಕವಿತೆಯ ಮೂಲ ಉದ್ದೇಶ ಮಗುವಿನ ಬೆಳವಣಿಗೆಯ ಕುರಿತು ಹೇಳುವುದಾಗಿದೆ. ಎರಡನೆಯದಾಗಿ ಕವಿ ಇಟ್ಟುಕೊಂಡ 'ದೀಪಧಾರಿ' ಶೀರ್ಷಿಕೆಯೇ ಹೇಳುವಂತೆ ಒಂದು ಪ್ರತೀಕ (ಮೂರ್ತಿಕರಣ) ವನ್ನು ಕಟ್ಟಿಕೊಡುತ್ತದೆ ಹಾಗೂ ಕಾವ್ಯ ಹುಟ್ಟುವ, ಬೆಳೆಯುವ ಪ್ರಕ್ರಿಯೆಯನ್ನು ಬಿಚ್ಚುತ್ತದೆ. ಮತ್ತೊಮ್ಮೆ ಕಣ್ಣು ನೆಟ್ಟಾಗ 'ಜೋಲಿ' ಮೇಲೆ ಹೊಡೆಯುವ, ತಂತಿ ಮೇಲೆ ಓಡುವ, ನಡೆವ ವಿವಿಧ ಕಸರತ್ತು ಎನ್ನುವಲ್ಲಿ ಕವಿ ಛಂದಸ್ಸಿನ ಮಧ್ಯದಲ್ಲಿ ಎಚ್ಚರದಿಂದ ನಡೆಯಬೇಕಾದ ಸಂದರ್ಭವನ್ನು ಧ್ವನಿಸುತ್ತದೆ.

"ಪದವಿಟ್ಟುದೇ ಭಂಗಿ
ನಡೆದದ್ದೇ ದಾರಿ
ಕಣ್ಣು ತಪ್ಪಿದರಿವಸು ವಿಶ್ವ ಸಂಚಾರಿ
ಹಿಡಿದಿದ್ದೆ ಹಠ ಇವನು ನುಡಿದದ್ದೆ ವೇದ
ತಳ ಕಿತ್ತು ಓಡುವವು ಎಲ್ಲಿ ವಾಗ್ವಾದ" [೧೪]

ಇಲ್ಲಿಯ ಭಾವನೆಯ ವ್ಯಂಜನೆಗೆ ಲಯ ಬಂಧದ ಆಧಾರವಿಲ್ಲ. ಇದು ಸ್ವಚ್ಛಂದ ಛಂದ 'ಪದವಿಟ್ಟುದೇ ಭಂಗಿ' ಆದರೆ ಅಲ್ಲಲ್ಲಿ ಹಿತ ದೂರದಲ್ಲಿ ಮಿತವಾದ ಪ್ರಾಸಗಳ ಜೋಡಣೆ ಹೃದ್ಯವಾಗಿ ಬಂದಿದೆ. ಇಲ್ಲಿಯ ಮಗುವು ಒಂದೊಂದೆ ಹೂ–ಚಿಗುರು ಹೆಜ್ಜೆ ಇಟ್ಟು ನಡೆಯುವ ಹಂತದಲ್ಲಿದ್ದಾನೆ. ಆತ್ಮೀಯ ಅನುಭೂತಿ ನಿರೀಕ್ಷಣೆಯ ವಾತ್ಸಲ್ಯದ ಒರತೆಯಲ್ಲಿ ಒಂದೊಂದು ಸಾಲು ತೊಯ್ದು ತೊಳಗಿದೆ.

ಅಡಿಗರ ಸಂಕೇತ ಮತ್ತು ಪ್ರತಿಮೆಗಳನ್ನು ದಿಢೀರನೆ ಅನುಕರಣೆ ಮಾಡಲು ಕಣವಿಯವರು ಮುಂದಾಗಲಿಲ್ಲ. ಸಮಕಾಲೀನ ಜೀವನದ ಗೊಂದಲ, ಗಡಿಬಿಡಿ, ವಿಷಾದ, ಜಿಗುಪ್ಸೆ, ಜಟಿಲತೆಗಳು, ನವ್ಯ ಕವಿತೆಯ ಛಂದೋ ರೂಪವನ್ನು ಪಲ್ಲಟಗೊಳಿಸಿವೆ. ಆಡುಮಾತಿನ ಲಯ, ನಾಗರೀಕ ಪ್ರಜ್ಞೆಯ ನವ್ಯ ಸಂವೇದನೆಗಳಿಗೆ ಪ್ರತಿಮೆ ಸಂಕೇತಗಳಲ್ಲಿ ಮೂರ್ತ ಸ್ವರೂಪ ಒದಗಿಸುತ್ತದೆ"[೧೫] ಎಂದು ಕಣವಿಯವರು ಈ ಬಗ್ಗೆ ಸೂಕ್ಷ್ಮವಾಗಿ ಆಲೋಚಿಸಿದ್ದಾರೆ.

'ದೀಪಧಾರಿ'ಯಿಂದ 'ನಗರದಲ್ಲಿ ನೆರಳು' ವರೆಗೆ ನವ್ಯ ಮಾರ್ಗದಲ್ಲಿ ನಡೆದು ಬಂದಿರುವ ಕಣವಿಯವರ ಕಾವ್ಯದಲ್ಲಿ ವೈವಿಧ್ಯಮಯವಾದ ಹೆಜ್ಜೆಗಳಿವೆ. ಮುಕ್ತ ಛಂದಸ್ಸಿನೊಳಗೆ ಬೆಂಬಲಗೊಳ್ಳುವ ಪ್ರತಿಮೆ, ಪ್ರತೀಕ ನಾವ್ಯೀಕರಣಗೊಳ್ಳುವ ಭಾಷೆಯಲ್ಲಿ ದೇಸೀಯತೆಯ ಅರುಹಿನ ಹೆಜ್ಜೆಗಳು ಕಂಡು ಬರುತ್ತವೆ. ಇವುಗಳ ಜೊತೆಗೆ 'ಸುನೀತ'ಗಳನ್ನು ರಚಿಸಿರುವ ಕಣವಿಯವರು ಕಾವ್ಯ ಶಿಲ್ಪಕ್ಕೆ ಮತ್ತು ಕ್ರಿಯೆಗೆ ಅತ್ಯಂತ ಮಹತ್ವ ನೀಡುವುದೂ ಗಮನಕ್ಕೆ ಬರುತ್ತದೆ. ಅರ್ಥಾನುಸಾರಿಯಾದ ಲಯ ಮತ್ತು ನಿರ್ದಿಷ್ಟವಾದ ರೂಪಗಳಿಗೆ ಮನ್ನಣೆ ಲಭ್ಯವಾಗಿರುವುದನ್ನು ಲಕ್ಷಿಸಬೇಕು.

ಮಾರ್ಗೀಯ ಮತ್ತು ದೇಶೀ ಕಾವ್ಯಗಳ ಸತತ ವ್ಯಾಸಂಗ ಹಾಗೂ ವ್ಯಾಮೋಹದಿಂದಾಗಿ ಪ್ರಾಸ, ಲಯ, ಛಂದೋಬಂಧಗಳು ಒಂದು

ಸಹಜ ಲೀಲೆ ಎನ್ನಿಸಿತು. ಆದ್ದರಿಂದಲೇ ಅವರ ನವ್ಯ ತಂತ್ರದ ಕೃತಿಗಳಲ್ಲಿಯೂ ಸಾಕಷ್ಟು ಅಂತರ್ ಪ್ರಾಸಗಳ ಸುಳಿದಾಟವಿರುತ್ತದೆ. ಹಾಗೆಯೇ ಪದ ಪಂಕ್ತಿಗಳು ಸಲೀಸಾಗಿ ಐದು ಮಾತ್ರೆಗಳ ಗಣದ ಲಯಕ್ಕೆ ಹೆಜ್ಜೆ ಹಾಕುತ್ತವೆ. ಸರಳ ರಗಳೆ ಸ್ವಚ್ಛಂದ ಛಂದ, ವೃತ್ತ ಬಂಧ ಯಾವುದೇ ರೂಪದಲ್ಲಿ ಈ ೫ ಮಾತ್ರೆಗಳ ಗಣತಿಯು ಕವಿಯ ನುಡಿಗಾರಿಕೆಗೆ ನಿರಾಯಾಸವಾಗಿ ನಿಲುಕುತ್ತದೆ. “ಆದರೆ ಪ್ರಾಸವು ಕಾವ್ಯಕ್ಕೆ ಅನಗತ್ಯವಲ್ಲವೆಂದು ಈ ಕವಿ ಚೆನ್ನಾಗಿ ಬಲ್ಲ. ಈ ಕವಿಯ ಹಲವಾರು ಉತ್ತಮ ಕವನಗಳಿಗೆ ವೃತ್ತ ಬಂಧದ ಲಯಗಾರಿಕೆ ಇದ್ದೂ ಅಂತ್ಯ ಪ್ರಾಸಗಳಲ್ಲಿ ಇನ್ನೆಷ್ಟೋ ಕಡೆಗೆ ಅವರ ಹಲವು ಅಷ್ಟ ಷಟ್ಪದಿ ಪ್ರಯೋಗಗಳಲ್ಲಿ ಫ್ರಾಸಿನ ತ್ರಾಸ ಅವರು ಏನೇನು ಪಟ್ಟಿಲ್ಲ”[೧೬]. ಅಷ್ಟ ಷಟ್ಪದಿಗಳ ವಿಧ ವಿಧದ ಪ್ರಯೋಗಗಳಲ್ಲಿ ಕಣವಿಯವರದು ಒಂದು ಅಪೂರ್ವತೆಯಿದೆ. ಹದಿನಾಲ್ಕು ಸಾಲುಗಳ ಈ ಕವನಾಕೃತಿಯನ್ನು ಅವರು ಏಳು ದ್ವಿಪದಿಗಳ ಗುಂಪಾಗಿ ಪ್ರಾಸವಿಟ್ಟು, ಬಿಟ್ಟು ವೈವಿಧ್ಯದ ವೈಖರಿಯನ್ನು ಮೆರೆದಿದ್ದಾರೆ.

ಕಣವಿಯವರ ಪ್ರತಿಮಾ ಪ್ರಪಂಚ ಉಪಮೆ, ರೂಪಕ, ದೃಷ್ಟಾಂತ, ಉತ್ಪ್ರೇಕ್ಷೆಗಳ ಪ್ರಪಂಚವನ್ನು ಒಳಗೊಂಡಿದೆ. ಈ ಸೃಷ್ಟಿಗೆ ಉಪಾದಾನ ದ್ರವ್ಯ ವೇದದಿಂದ ಪಂಚತಂತ್ರದವರೆಗೂ, ವೇದಾಂತದಿಂದ ವ್ಯವಹಾರದವರೆಗೂ, ಅಂತರಿಕ್ಷದಿಂದ ಅಂತರಂಗದವರೆಗೂ ಹಬ್ಬಿಕೊಂಡಿದೆ. ಕಣವಿಯವರ ಶಬ್ದ ಪ್ರಯೋಗ ಇಲ್ಲವೇ ಪದವಣಿಕೆಯ ರೀತಿ ಅವರ ಒಟ್ಟು ಧೋರಣೆಯ ಪ್ರವಾಹಿತ್ವಕ್ಕೂ, ಭವವಾಹಿತ್ವಕ್ಕೂ, ಬಿಂಬಗ್ರಾಹಿತ್ವಕ್ಕೂ ಬೆರಳಿಗೆ ಉಂಗುರವಿದ್ದಂತೆ. ಸಂಸ್ಕೃತ, ಹಳೆಗನ್ನಡ, ಗ್ರಾಂಥಿಕ, ಗ್ರಾಮೀಣ, ದಿನ ಬಳಕೆಯ, ವಿದ್ವತ್ತೆಯ–ಯಾವ ಕೋಶದಿಂದಲೂ ತೆಗೆದುಕೊಂಡಿರಲಿ ವಿಶೇಷ, ವಿಶೇಷಣಗಳು, ಶಬ್ದ ಸಾಂಗತ್ಯಗಳು ಖಚಿತವಾಗಿ, ಉಚಿತವಾಗಿ ಕೊಡುತ್ತವೆ.

ಕಣವಿಯವರು ಕಾವ್ಯವನ್ನು ಹೊರತು ಪಡಿಸಿದಂತೆ ಗದ್ಯ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕಾವ್ಯ–ಕಾವ್ಯ ಮೀಮಾಂಸೆಗೆ ಸಂಬಂಧಿಸಿದ ವಿಚಾರ ವಿಮರ್ಶೆ ಮೀಮಾಂಸೆಯನ್ನೂ ನಡೆಸಿದ್ದಾರೆ. ಕಣವಿಯವರ ಪ್ರಥಮ ಗದ್ಯ ಕೃತಿ ‘ಸಾಹಿತ್ಯ ಚಿಂತನದಲ್ಲಿ’ ಬರುವ ‘ವಚನ ಸಾಹಿತ್ಯದಲ್ಲಿ ಉಪಮೆ’ ಎಂಬ ಲೇಖನವು ಕಾವ್ಯ ಲಕ್ಷಣಕ್ಕೆ ಸಂಬಂಧಿಸಿದ್ದು. ವಚನ ಸಾಹಿತ್ಯಕ್ಕೆ ವಿಶೇಷ ಸ್ವರೂಪ ಬಂದಿದ್ದು ಉಪಮೆ, ದೃಷ್ಟಾಂತ, ರೂಪಕಗಳಿಂದ. ಇಲ್ಲವಾದರೆ ಅದು ಉಪನಿಷತ್ತಿನಂತೆ ಉಪದೇಶಾತ್ಮಕ ನಿರೂಪಣೆಯಾಗುತ್ತಿತ್ತು. ಅಮೂರ್ತವಾದ ಎಷ್ಟೋ ಅನುಭವಗಳನ್ನು ವಚನಕಾರರು ಉಪಮೆ ಮೊದಲಾದವುಗಳಿಂದಲೇ ಅನನ್ಯವಾಗಿ ತಿಳಿಸಿ ಕೊಟ್ಟಿದ್ದಾರೆ. ಅಂತೆಯೇ ಕಣವಿಯವರು ಬಸವಣ್ಣನವರಲ್ಲಿ ಕಂಡು ಬರುವ ಉಪಮೆಗಳನ್ನು ಅದೂ ಸಂಕ್ಷೇಪವಾಗಿ ಅವಲೋಕಿಸಿದ್ದಾರೆ. ‘ಅಂದಣವನೇರಿದ ಸೊಣಗನಂತೆ’, ‘ನಿಧಾನವ ಕಾಯ್ದಿರ್ದ ಬೆಂತರದಂತೆ’, ‘ಕಂಬಳಿಯಲ್ಲಿ ಕಣಕವ ನಾದಿದಂತೆ’, ‘ಬೆಲ್ಲ ತಿಂದ ಕೋಡಗನಂತೆ’, ಹೀಗೆ ಸಾಲುಗಟ್ಟಿ ಬರುವ ಉಪಮೆಗಳ ಅಭಿವ್ಯಕ್ತಿ ಸ್ವರೂಪವನ್ನು ಕಣವಿಯವರು ಗುರುತಿಸಿದ್ದು ವಿಶೇಷವೆನಿಸುತ್ತದೆ. ಈ ವಿವೇಚನೆಯಲ್ಲಿ ಕಣವಿಯವರ ಕವಿ ಮನಸ್ಸು ಕೆಲಸ ಮಾಡಿದೆ. ಕಾವ್ಯ ಮೀಮಾಂಸೆಯ ಜ್ಞಾನ ಅದಕ್ಕೆ ನೆರವು ನೀಡಿದೆ. ಕಣವಿಯವರ ಅಧ್ಯಯನ ವಚನಗಳಲ್ಲಿ ಕಾಣುವ ಅಲಂಕಾರಗಳಿಗಷ್ಟೇ ಸೀಮಿತವಾಗಿಲ್ಲ. ಕಾವ್ಯ ಭಾಷೆಯನ್ನೊಳಗೊಂಡು ಲಯ, ಪ್ರಾಸ, ಇಂಥ ಕಾವ್ಯಕ್ಕೆ ನೇರವಾಗಿ ಸಂಬಂಧಿಸಿದ ಸಂಗತಿಗಳನ್ನು ಗಮನಿಸಬಹುದಾಗಿದೆ. ಬಸವಣ್ಣನವರ ಅನುಭವದ ಅಭಿವ್ಯಕ್ತಿಗೆ ರೂಪಕಗಳಂತೆ ಪ್ರತೀಕ. ಪ್ರತಿಮೆ ನುಡಿ ಚಿತ್ರಗಳೂ ಹದವರಿತು ಒದಗಿ ಬಂದು ವಚನಗಳ ಕಾವ್ಯ ಗುಣವನ್ನು ಹೆಚ್ಚಿಸಿವೆ ಎಂದು ಸೋದಾಹರಣವಾಗಿ ವಿವೇಚಿಸಿದ್ದಾರೆ.

ಕಣವಿಯವರ ‘ಕಾವ್ಯಾನುಸಂಧಾನ’ ಗ್ರಂಥದಲ್ಲಿರುವ ‘ಜನಪದ ಕಾವ್ಯದಲ್ಲಿ ಪ್ರತಿಮಾ ವಿಧಾನ’ ಎಂಬ ಲೇಖನದಲ್ಲಿ ಕಣವಿಯವರ ಆಳವಾದ ಹಾಗೂ ವ್ಯಾಪಕವಾದ ಅಧ್ಯಯನ ಪ್ರತಿಬಿಂಬಿತವಾಗಿದೆ. ಹತ್ತಾರು ಜಾನಪದ ಹಾಡುಗಳ ಸಂಗ್ರಹಗಳನ್ನು ಎದುರಿಗಿಟ್ಟುಕೊಂಡು ಪ್ರತಿಯೊಂದು ಹಾಡಿನಲ್ಲಿ ಕಂಡು ಬರುವ ಪ್ರತಿಮಾ ಸೃಷ್ಟಿಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿ ಆಯ್ದು ಕೊಂಡಿದ್ದಾರೆ. ಪ್ರತಿಮಾಗಳಿಗೆ ಪೀಠಿಕೆಯಾಗಿ ಕಾವ್ಯ ಮೀಮಾಂಸೆಯ ಲಕ್ಷಣಗಳನ್ನು ಕೊಟ್ಟಿದ್ದು ಕೂಡಾ ಶಾಸ್ತ್ರಕಾರನ ಶಿಸ್ತಿನಿಂದ ಕೂಡಿದೆ. ತೀ.ನಂ.ಶ್ರೀ., ಕುವೆಂಪುರವರ ವ್ಯಾಖ್ಯೆ–ವ್ಯಾಖ್ಯಾನಗಳನ್ನು ಗಮನಿಸಿದ್ದಲ್ಲದೇ ಜೆ. ಮಿಡ್ಲೆಟನ್ ಮರ್‍ರೆಯ ವ್ಯಾಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಪ್ರತಿಮಾ ವಿಧಾನದ ಛಾಯೆ ಮಾತ್ರ ಇರುವುದೆಂದು ಹೇಳುವ ಕಣವಿಯವರು ತ್ರಿಪದಿ, ಲಾವಣಿ, ಇತ್ಯಾದಿ ಪ್ರಕಾರಗಳಲ್ಲಿ ಮಿಂಚುತ್ತಿರುವ ಪ್ರತಿಮೆಗಳನ್ನು ಆರಿಸಿದ್ದು, ಅವುಗಳ ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಧ್ವನಿ ಸಾಮರ್ಥ್ಯಗಳನ್ನು ವಿವರಿಸುತ್ತಾರೆ.

ಕಣವಿಯವರ ಪ್ರಮುಖ ಗದ್ಯ ಗ್ರಂಥಗಳಲ್ಲಿ ಆಧುನಿಕ ಸಾಹಿತ್ಯದ ವಿಶಿಷ್ಟ ಅಧ್ಯಯನವಿದ್ದು ಕೆಲವು ವ್ಯಕ್ತಿಗಳ ಸಾಹಿತ್ಯಿಕ ಕೊಡುಗೆಯನ್ನು ಗಮನಿಸಲಾಗಿದೆ. ಇಲ್ಲೆಲ್ಲಾ ಸೂಕ್ಷ್ಮ ಸೈದ್ಧಾಂತಿಕ ಚರ್ಚೆಯನ್ನು ಕಣವಿಯವರು ನಡೆಸಿದ್ದಾರೆ. ಅವರ ಗದ್ಯ ಗ್ರಂಥಗಳ ಶೀರ್ಷಿಕೆಗಳು ಸೂಚಿಸುವಂತೆ ಚಿಂತನ–ಅನುಸಂಧಾನ ಒಟ್ಟೊಟ್ಟಿಗೆ ನಡೆದಿವೆಯೆನ್ನಬಹುದು.

ಇವರ ಎರಡನೆಯ ಗದ್ಯ ಗ್ರಂಥವಾದ ‘ಕಾವ್ಯಾನುಸಂಧಾನ’ದಲ್ಲಿ ಕಾವ್ಯ ಸೃಷ್ಟಿ ಹೇಗಾಗುತ್ತದೆಂಬುದನ್ನು ವಿವರಿಸಿ ಪಂಪ, ಹರಿಹರರ ಕಾವ್ಯದ ಉದಾಹರಣೆ ಕೊಡುವುದರೊಂದಿಗೆ ಆಧುನಿಕರಾದ ಬೇಂದ್ರೆ, ಕುವೆಂಪು, ಅಡಿಗರಿಂದಲೂ ಉದಾಹರಣೆ ಎತ್ತಿಕೊಂಡಿದ್ದಾರೆ. ‘ಕಾವ್ಯ ಮುಖ್ಯವಾಗಿ ಭಾಷೆಯಲ್ಲಿ ರೂಪುಗೊಂಡ ಕವಿಯ ಭವ ನಿರೂಪಣೆ’ ಎಂದಿದ್ದಾರೆ. ಕನ್ನಡದ ಕಾವ್ಯದಲ್ಲಿ ನೂತನ ಪ್ರತಿಮೆ ಸಂಕೇತಗಳು ಎಂಬ ಕಣವಿಯವರ ಲೇಖನ ಆಧುನಿಕ ಕನ್ನಡ ಕಾವ್ಯದಲ್ಲಿಯ ಪ್ರತಿಮೆ ಸಂಕೇತಗಳನ್ನು ಪರಿಚಯಿಸುತ್ತದೆ. ‘ಕವಿ ಸಮಯ’ದ ವ್ಯಾಖ್ಯೆಯಿಂದ ಪ್ರಾರಂಭವಾಗುವ ಈ ಲೇಖನ ಕಾವ್ಯ ಮೀಮಾಂಸೆಯ ಸ್ವರೂಪದ ಬಗ್ಗೆ ಚರ್ಚಿಸಿ ಹೊಸಗನ್ನಡದಲ್ಲಿ ಬಳಕೆಯಾಗುವ ಅಥವಾ ಕವಿಗಳ ನೂತನ ಸೃಷ್ಟಿಯಾದ ಪ್ರತಿಮೆಗಳನ್ನು ಉದಾಹರಣೆಯಾಗಿ ಎತ್ತಿಕೊಳ್ಳುತ್ತಾರೆ. ಬೇಂದ್ರೆ, ಕುವೆಂಪು, ಪು.ತಿ.ನ., ಮುಂತಾದ ಹಿರಿಯ ಕವಿಗಳ ಪ್ರಯೋಗಗಳನ್ನಲ್ಲದೇ ಕಂಬಾರ, ಚಂಪಾ, ಎ.ಕೆ. ರಾಮಾನುಜನ್ ಈ ಹೊಸಬರ ಅಭಿವ್ಯಕ್ತಿ ಕ್ರಿಯೆಗಳನ್ನು ಕಣವಿಯವರು ಗಮನಿಸಿದ್ದಾರೆ. ಪ್ರಾಚೀನ ಅಲಂಕಾರಕ್ಕಿಂತ ಭಿನ್ನವಾದ ಆದರೆ ತುಂಬ ಅರ್ಥಗರ್ಭಿತವಾದ ಈ ಪ್ರತಿಮಾ ಸೃಷ್ಟಿ ಹೊಸಗನ್ನಡ ಕಾವ್ಯದ ಮಹತ್ವದ ಕೊಡುಗೆ ಎನ್ನಬಹುದು. ಕಾವ್ಯಾನುಸಂಧಾನವು ಈ ಲೇಖನದಿಂದ ತನ್ನ ಬೆಲೆಯನ್ನು ಹೆಚ್ಚಿಸಿಕೊಂಡಿದೆ.

ಮುಪ್ಪಿನ ಷಡಕ್ಷರಿಯ ಹಾಡುಗಳು ಆಧ್ಯಾತ್ಮಿಕ ಸಾಧನೆಯ ಪ್ರತಿಬಿಂಬಗಳು. ಅವರ ಇಷ್ಟಲಿಂಗ, ಪೂಜಾ ನಿಷ್ಠೆ ಅಸಾಧಾರಣವಾದುದು. ಸಮತೆಯ ಜಲ, ಸದ್ಗುಣದ ಗಂಧ, ನಿತ್ಯತ್ವದ ಅಕ್ಷತೆ, ಜ್ಞಾನದ ಪುಷ್ಪ, ಭಕ್ತಿಯ ಭೋಗ, ಮನವೆಂಬ ಪೂಜಾರಿ ಈ ಪರಿಕರದಲ್ಲಿ ಅವರ ಶಿವಯೋಗದ ಸಾಧನೆಯುಂಟು. ಕಣವಿ ಈ ಹಿನ್ನೆಲೆಯಲ್ಲಿ ಅವರ ವ್ಯಕ್ತಿತ್ವವನ್ನು ಗುರುತಿಸುತ್ತಾರೆ. ಲಿಂಗದಲ್ಲಿಯ ಅವರ ನಿಷ್ಠೆ ನಿಸ್ಸೀಮವಾದುದು, ‘ಎನ್ನ ಕರದೊಳಗಿರ್ದು ಎನ್ನೊಳೇತಕೆ ನುಡಿಯೆ ಎನ್ನ ಭವಭವದಲ್ಲಿ ಬಿಡದಾಳ್ದನೆ’ ಎಂದು ಸಲುಗೆಯಿಂದ ಬಿನ್ನವಿಸುತ್ತಾರೆ. ‘ಎನ್ನೊಡನೆ

ನುಡಿಯದಿರೆ ನಿನ್ನನಾಭವಭವದಿ ಬೆನ್ನಬಿಡುವೆನೆ ಷಡಕ್ಷರಿ ಲಿಂಗವೇ' ಎಂಬ ಹಾಡಿನ ಭಾವ ಸೌಂದರ್ಯ ಅವರ್ಣನೀಯವಾಗಿದೆ ಎಂದು ಕಣವಿಯವರು ಗುರುತಿಸಿದ ಭಾವ ಸೌಂದರ್ಯದಲ್ಲಿ ಅನುಭಾವ ಸೌಂದರ್ಯವಿರುವುದನ್ನು ಗುರುತಿಸುತ್ತಾರೆ. ಶಿವಯೋಗಿಗಳ ಹಾಡುಗಳಲ್ಲಿ ಸೌಂದರ್ಯವನ್ನು ಗುರುತಿಸುವುದರ ಜೊತೆಗೆ ಅವರು ಕಂಡ ದರ್ಶನವನ್ನು ಅವಲೋಕಿಸುತ್ತಾರೆ. "ಉದಾತ್ತ ಭಾವದ ವಿಶಾಲ ಹೃದಯದ ದರ್ಶನ ಶುದ್ಧಿ ಮುಪ್ಪಿನಾರ್ಯರ ಹೊಂಗಳಸಾಗಿ ಅವರ ಹಾಡುಗಳಲ್ಲಿ ಕಂಗೊಳಿಸುತ್ತದೆ. ಅನುಭಾವದ ತುತ್ತ ತುದಿಯಲ್ಲಿ ನಿಂತು ತನ್ಮಯತೆಯಿಂದ ನುಡಿವ ಅವರ ಹೃದಯ ವೀಣೆಯ ಮಂಜುಳ ನಿನಾದ ಇಡಿಯ ವಿಶ್ವವನ್ನೇ ತರಂಗ ತರಂಗವಾಗಿ ವ್ಯಾಪಿಸಿಕೊಳ್ಳುತ್ತದೆ. ಅಪೂರ್ಣ ದೃಷ್ಟಿಯ ಸಂಕುಚಿತತನವನ್ನು ಮುಳುಗಿಸಿ ಪರಿಪೂರ್ಣ ದೃಷ್ಟಿಯ ವಿಶಾಲ ಭಾವವನ್ನು ತಾನೇ ತಾನಾಗಿ ಪಸರಿಸಲು ಸಮರ್ಥವಾಗುತ್ತದೆ"[೧೭]. ಹೀಗೆ ತಮ್ಮ ವಿಶಿಷ್ಟ ವಿಮರ್ಶೀಯ ತೀರ್ಪನ್ನು ನೀಡುತ್ತಾರೆ. 'ಪುರಂದರದಾಸರಲ್ಲಿಯ ಕಾವ್ಯ ಗುಣ" ಎಂಬ ಲೇಖನದಲ್ಲಿ ಪುರಂದರದಾಸರ ಕೀರ್ತನೆಗಳು ಕನ್ನಡ ಸಾಹಿತ್ಯದ ಇನ್ನೊಂದು ಉಲ್ಲೇಖನೀಯ ಕೊಡುಗೆಯಾಗಿದ್ದು ಆ ಕೊಡುಗೆಯನ್ನು ಕಾವ್ಯ ತತ್ವದ ದೃಷ್ಟಿಯಿಂದ ಅವಲೋಕಿಸುವ ಪ್ರಯತ್ನವನ್ನು ಕಣವಿಯವರು ಮಾಡಿದ್ದಾರೆ. ಶರಣರು ಅನುಸರಿಸಿದ ಅನುಭಾವದ ದಾರಿಗೂ ದಾಸರು ಕೈಗೊಂಡ ಆಧ್ಯಾತ್ಮಿಕ ಮಾರ್ಗಕ್ಕೂ ಸಾಂಗತ್ಯವಿದೆ. ಸಾಹಿತ್ಯಿಕ ಗೇಯ್ಮೆಯಲ್ಲಿಯೂ ಹೊಂದಾಣಿಕೆ ಕಂಡು ಬರುತ್ತದೆ. ಇದನ್ನು ಬಲ್ಲ ಕಣವಿಯವರು 'ಕೀರ್ತನೆ, ಸುಳಾದಿ, ಉಗಾಭೋಗಗಳ ತಮ್ಮ ಧಾಟಿ ಹಾಗೂ ಧೋರಣೆಯಲ್ಲಿ ವಚನಗಳಿಗೆ ತೀರ ಹೊಂದಿಕೊಂಡಿವೆ' ಎಂದು ಅಭಿಪ್ರಾಯ ಪಡುತ್ತಾರೆ.

ವಿಮರ್ಶೆ ಬಗ್ಗೆ ಒಲವು ಹೆಚ್ಚು ಎಂದು ಕಣವಿವಯವರೇ ಒಂದು ಕಡೆ ಹೇಳಿದ್ದಾರೆ. 'ಕವಿಯ ಹೊಟ್ಟೆಯಲ್ಲಿ ಒಬ್ಬ ವಿಮರ್ಶಕ ಅಡಗಿದಂತೆ, ವಿಮರ್ಶಕನ ಹೊಟ್ಟೆಯಲ್ಲಿ ಒಬ್ಬ ಕವಿ ಅಡಗಿದ್ದಾರೆ' ಎಂಬುದನ್ನು ಅವರು ಬಲ್ಲರು. ಅವರ ವಿಮರ್ಶೆ, ಚಿಂತನೆ ಸ್ವರೂಪದ್ದು ಮತ್ತು ಅನುಸಂಧಾನದ ಮಾದರಿಯದು. ಒಂದು 'ಸಾಹಿತ್ಯ ಚಿಂತನ', ಇನ್ನೊಂದು 'ಕಾವ್ಯಾನುಸಂಧಾನ' ಈ ಚಿಂತನ ಮತ್ತು ಅನುಸಂಧಾನದ ಜೊತೆಗೆ ಇನ್ನೆರಡು ಗುಣಗಳು ಅವರ ಗದ್ಯ ಬರವಣಿಗೆಯಲ್ಲಿ ಸೇರಿಕೊಂಡಿವೆ. ಅವೆಂದರೆ ಸಮುಹಿತ ಮತ್ತು ಸಮತೋಲನ.

ಕಣವಿಯವರ ಪ್ರಥಮ ಗದ್ಯ ಕೃತಿಯಾದ ಸಾಹಿತ್ಯ ಚಿಂತನದಲ್ಲಿ ಮೊಟ್ಟ ಮೊದಲಿಗೆ ನಾವು ಕಾಣುವುದು 'ಬಸವಣ್ಣ'ನವರ ಭಾವಚಿತ್ರವನ್ನು. ಇಲ್ಲಿ ಬಸವಣ್ಣನವರ ಭಾವ ಚಿತ್ರವನ್ನು ಒಂದು ನಿಬಂಧದಲ್ಲಿ ಬಿಡಿಸಿಟ್ಟಿದ್ದು ಗಮನಿಸುವಂತಿದೆ. ಕನ್ನಡದಲ್ಲಿ ವಿಮರ್ಶೆಯ 'ಒಲವು–ನಿಲುವು' ವಿಮರ್ಶಾ ಕ್ಷೇತ್ರಕ್ಕೆ ಸಂಬಂಧಿಸಿದ ಕೃತಿ. ಕನ್ನಡದಲ್ಲಿ ವಿಮರ್ಶೆ ರೂಪುಗೊಂಡಿದ್ದೇ ಈಚೆಗೆ. ವಿಮರ್ಶಕ ಒಬ್ಬ ಸಹೃದಯ ಎಂಬುದನ್ನು ಪ್ರತಿಪಾದಿಸಿ ಕಣವಿಯವರು ಕವಿ–ವಿಮರ್ಶಕರಲ್ಲಿ 'ಸರಸ–ದಾಂಪತ್ಯ' ಬೆಳೆದಷ್ಟು ಸಾಹಿತ್ಯದಲ್ಲಿ ನೂತನ ಸೃಷ್ಟಿ ಕಂಗೊಳಿಸುತ್ತದೆ. 'ವಿಮರ್ಶೆ ಬೆಳೆದಷ್ಟು ಸಾಹಿತ್ಯದ ಜೀವ ಶಕ್ತಿ ಪುಷ್ಟಿಗೊಳ್ಳುತ್ತದೆ' ಎಂದು ಅಭಿಪ್ರಾಯ ಪಡುತ್ತಾರೆ.

ಕಣವಿಯವರು ಕನ್ನಡದಲ್ಲಿ ಬಿ.ಎಂ.ಶ್ರೀ. ಅವರಿಂದ ಪ್ರಾರಂಭವಾದ ವಿಮರ್ಶೆಯ ಬಳಿಕ ಮುಳಿಯ ತಿಮ್ಮಪ್ಪಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಮಾಸ್ತಿ, ಮಾಳವಾಡ, ಮೊದಲಾದವರಿಂದ ಆದ ಕಾರ್ಯವನ್ನು ಎತ್ತಿ ತೋರಿಸಿ ವಿಮರ್ಶೆಯ ಪ್ರಾರಂಭ ಹಾಗೂ ಬೆಳವಣಿಗೆಯ ಸ್ವರೂಪವನ್ನು ತಿಳಿಸಿಕೊಟ್ಟಿದ್ದಾರೆ. ಕುರ್ತಕೋಟಿಯವರವರೆಗಿನ ವಿಮರ್ಶೆಯ ಪರಿಗಳನ್ನು ಸಮೀಕ್ಷಿಸಿದ ಕಣವಿಯವರು 'ವಿಮರ್ಶೆ ಅವರಸದ ಪ್ರತಿಕ್ರಿಯೆಯಲ್ಲ, ಅದೊಂದು ಸಂಯಮಶೀಲವಾದ ಪರಿಭಾವನೆ' ಎಂದು ಹೇಳಿ ಅದು ಹೇಗೆ ಬೆಳೆಯಬೇಕೆಂಬುದರ ಬಗ್ಗೆಯೂ ತಮ್ಮ ಅನುಭವಪೂರ್ಣ ವಿಚಾರಗಳನ್ನು ಮಂಡಿಸಿದ್ದು ಈ ಲೇಖನದ ವೈಶಿಷ್ಟ್ಯವಾಗಿದೆ. 'ಹೊಸಗನ್ನಡ ಕಾವ್ಯದ ಭಾಷೆ ಮತ್ತು ಶೈಲಿ' ಎಂಬ ಲೇಖನವೂ ವಿಮರ್ಶೆಯ ವ್ಯಾಪ್ತಿಯೊಳಗೇ ಬರುವಂತಹುದು. ಪಂಪ, ರನ್ನ, ರಾಘವಾಂಕ, ಕುಮಾರವ್ಯಾಸರ ಕಾವ್ಯಗಳ ಉದ್ಧರಣೆಗಳಿಂದ ಪ್ರಾರಂಭವಾಗುವ ಈ ವಿಷಯದ ನಿರೂಪಣೆಯಲ್ಲಿ ಆಧುನಿಕ ಕವಿಗಳ ಭಾಷೆ, ಶೈಲಿಗಳ ವಿವರವಾದ ಚರ್ಚೆಯಿದೆ. ಹೊಸಗನ್ನಡ ಕಾವ್ಯದ ಚಾರಿತ್ರಿಕ ಹಿನ್ನೆಲೆಯುಳ್ಳ ಈ ಲೇಖನದ ಕಣವಿಯವರ ವಿಸ್ತೃತವಾದ ಓದಿಗೆ, ಅವಲೋಕನಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ.

'ಕನ್ನಡ ಕಾವ್ಯ ಹೊಸ ಬದುಕು' ಮತ್ತು 'ಹೊಸ ಕಾವ್ಯದ ಒಗರು' ಈ ಎರಡು ಲೇಖನಗಳು ನವೋದಯದ ನಂತರದಲ್ಲಾದ ಕಾವ್ಯದ ಬದಲಾವಣೆಗಳನ್ನು ಕ್ರಮವಾಗಿ ಚರ್ಚಿಸುತ್ತದೆ. ಮೊದಲನೆಯದು ನವ್ಯದ ಆಗಮನ ಮತ್ತು ಅದರ ಅಗತ್ಯವನ್ನು ತಿಳಿಸುತ್ತಲೇ ಗೋಕಾಕ, ಅಡಿಗರಾದಿಯಾಗಿ ನವ್ಯ ಕವಿಗಳು ಆ ಕಡೆಗೆ ಮುಖ ಮಾಡಿದ್ದು ಹೊಸ ತಲೆಮಾರಿನವರು ಥಟ್ಟನೆ ಅದಕ್ಕೆ ಒಲಿದದ್ದು ಮುಂತಾದುವುಗಳನ್ನು ಚಾರಿತ್ರಿಕ ರೀತಿಯಲ್ಲಿಯೇ ಕಣವಿಯವರು ಚರ್ಚಿಸಿದ್ದಾರೆ. ಕಣವಿಯವರು ತಮ್ಮನ್ನು ಒಳಗೊಂಡು ಆ ಕಾಲದಲ್ಲಿ ನಡೆಸಿದ ಬೇರೆ ಬೇರೆ ಕವಿಗಳ ಹೊಸ ಪ್ರಯೋಗಗಳನ್ನು ಹೊಸ ದೃಷ್ಟಿಕೋನದಿಂದ ನೋಡಿದ್ದಾರೆ. ಅಗತ್ಯವೆನಿಸಿದಲ್ಲಿ ವಿಮರ್ಶಾತ್ಮಕವಾಗಿ ವಿವೇಚನೆ ಮಾಡಿದ್ದಾರೆ. ನವ್ಯ ಕಾವ್ಯದ ಮೂಲದ್ರವ್ಯವನ್ನು ಕುರಿತು ಮಾತನಾಡುವಾಗ 'ಇಂದಿನ ಹೊಸ ಜಗತ್ತನ್ನು ಅದರ ಎಲ್ಲ ಜಟಿಲತೆಯನ್ನು ಕ್ಲಿಷ್ಟತೆಯನ್ನು ವಿರೋಧಾಭಾಸವನ್ನು, ಅನುಭವದ ಸಂಕೀರ್ಣತೆಯನ್ನು ಆಧುನಿಕ ಮನುಷ್ಯನ ಅಂಜಿಕೆ, ನಿರಾಶೆಗಳನ್ನು ನವ್ಯ ಕವಿತೆ ನೈಜವಾದಿ ಪ್ರಾತಿನಿಧಿಕವಾಗಿ ಚಿತ್ರಿಸಬಲ್ಲದು ಎಂದು ವಿಮರ್ಶಿಸಿದ್ದಾರೆ.

'ವಚನ ಸಾಹಿತ್ಯ'ದಂತಹ ಮಹತ್ವದ ಕೊಡುಗೆಯನ್ನು ಅದರಲ್ಲೂ ಬಸವಣ್ಣನವರ ಸಾಧನೆಯನ್ನು ಲಕ್ಷ್ಯಪೂರ್ವಕವಾಗಿ ಅಧ್ಯಯನ ಮಾಡಿದ ಕಣವಿಯವರು, ಸರ್ವಜ್ಞ, ಮುಪ್ಪಿನ ಷಡಕ್ಷರಿ, ಪುರಂದರದಾಸರಂಥ ಹಿಂದಿನ ಕವಿಗಳ ಸಾಧನೆಯನ್ನು ವಿಮರ್ಶಾ ದೃಷ್ಟಿಯಿಂದಲೇ ನೋಡಿದ್ದಾರೆ. ಸರ್ವಜ್ಞನ ಕಾಣ್ಕೆಯನ್ನು ಪ್ರಶಂಸಿಸುತ್ತಲೇ 'ಸರ್ವಜ್ಞ'ನ ಕಾವ್ಯವನ್ನು ನೀತಿ ಕಾವ್ಯವೆಂದು ಪರಿಗಣಿಸಿದರೂ ಅದರ ವಿಶಿಷ್ಟತೆಯನ್ನು ನಾವು ಒಪ್ಪಬೇಕಾಗುತ್ತದೆ. ಕಾವ್ಯಾಂಶಕ್ಕೆ ಸ್ವಲ್ಪ ಹುಡುಕಬೇಕಾದ ತುಷ್ಟಿ' ಎನ್ನುತ್ತಾರೆ. ಉಳಿದಂತೆ ಸರ್ವಜ್ಞನ ಅಗಾಧವಾದ ಸಾಮಾಜಿಕ ಪ್ರಜ್ಞೆ, ಜೀವನ ವಿಮರ್ಶೆ, ತ್ರಿಪದಿಯ ಅಚ್ಚುಕಟ್ಟುತನವನ್ನು ಕುರಿತು ವಿಮರ್ಶಿಸಿದ್ದಾರೆ.

**ಅಡಿಟಿಪ್ಪಣಿ**


೧. ಕಣವಿ ಸಮಗ್ರ ಕಾವ್ಯ – ಸಂವಹನ, ಶಿವರಾಂಪೇಟೆ, ಮೈಸೂರು, ೨೦೦೩, ಪುಟ–೧೮೯
೨. ಅದೇ ಪುಟ–೨೩
೩. ಅದೇ ಪುಟ–೨೩
೪. ಅದೇ ಪುಟ–೭
೫. ಅದೇ ಪುಟ–೨
೬. ಅದೇ ಪುಟ–೬
೭. ಅದೇ ಪುಟ–೩೬
೮. ಅದೇ ಪುಟ–೮೫
೯. ಅದೇ ಪುಟ–೧೩೬
೧೦.ಚೆನ್ನವೀರ ಕಣವಿ 'ಕಾವ್ಯಾನುಸಂಧಾನ', ೧೯೭೧, ಪುಟ–೫
೧೧. ಜಿ.ಎಸ್. ನಾಯಕ 'ವಿನಯ ವಿಮರ್ಶೆ', ಪುಟ–೭೮, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು,೧೯೯೧

೧೨.ಕಸ್ತೂರಿ ಮಾಸ ಪತ್ರಿಕೆ, ಜುಲೈ, ೧೯೮೯
೧೩.ಕಣವಿ ಸಮಗ್ರ ಕಾವ್ಯ – ಸಂವಹನ, ಶಿವರಾಂಪೇಟೆ, ಮೈಸೂರು, ೨೦೦೩, ಪುಟ–೧೮೯
೧೪.ಅದೇ ಪುಟ–೧೮೯
೧೫. ಚೆನ್ನವೀರ ಕಣವಿ 'ಕಾವ್ಯಾನುಸಂಧಾನ', ೧೯೭೧, ಪುಟ–೮
೧೬.ಚೆನ್ನವೀರ ಕಣವಿ ಅವರ ಕಾವ್ಯ ದೃಷ್ಟಿ – ಒಂದು ಸಮೀಕ್ಷೆ, ಗೌರೀಶ್ ಕಾಯ್ಕಿಣಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೧೯೭೭, ಪುಟ–೫೩
೧೭.ಚೆನ್ನವೀರ ಕಣವಿ–ಡಾ. ಗುರುಲಿಂಗ ಕಾಪಸೆ, ನವ ಕರ್ನಾಟಕ ಪ್ರಕಾಶನ, ೨೦೦೯, ಪುಟ–೮೯

**ಆಕಾರ ಗ್ರಂಥಗಳು**

೧. ಕಣವಿ ಸಮಗ್ರ ಕಾವ್ಯ : ಚನ್ನವೀರ ಕಣವಿ
೨. ಕಾವ್ಯಾನುಸಂಧಾನ : ಚನ್ನವೀರ ಕಣವಿ
೩. ವಿನಯ ವಿಮರ್ಶೆ : ಡಾ.ಜಿ.ಎಸ್.ನಾಯಕ
೪. ಕಸ್ತೂರಿ ಮಾಸ ಪತ್ರಿಕೆ ಜುಲೈ–೧೯೮೯
೫. ಚನ್ನವೀರ ಕಣವಿ ಅವರ ಕಾವ್ಯ ದೃಷ್ಟಿ – ಒಂದು ಸಮಿಕ್ಷೆ : ಗೌರೀಶ್,ಕಾಯ್ಕಿಣಿ.
೬. ಚನ್ನವೀರ ಕಣವಿ : ಡಾ. ಗುರುಲಿಂಗ ಕಾಪಸೆ